## ಕರ್ನಾಟಕ ವಿಧಾನಪರಿಷತ್ತು

1. ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 958
2. ಸದಸ್ಯರ ಹೆಸರು : ಶ್ರೀ ಸೂರಜ್ ರೇವಣ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ )
3. ಉತ್ತರಿಸಬೇಕಾದ ದಿನಾಂಕ : 24-02-2022
4. ಉತ್ತರಿಸಬೇಕಾದ ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಪ್ರತಿ ತಿಂಗಳು ಕರ್ನಾಟಕ ಪ್ರಗತಿ ಮಾಹೆಯ ಸಮೀಕ್ಷಾ (ಕೆ.ಡಿ.ಪಿ) ಸಭೆಯಲ್ಲಿ ಹಲವಾರು ಇಲಾಖೆಗಳಿಗೆ ಸಂಬಂಧಿಸಿದ ಸಿ ಹಾಗೂ ಎ. ಜಿ ( ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು) ವರದಿಗಳು ಸಭೆಯಲ್ಲಿ ಮಂಡನೆಯಾಗುತ್ತಿದೆಯೇ; | ಇಲ್ಲ. |
| ಆ) | ಹಾಗಿದ್ದಲ್ಲಿ, ( ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು) ಎತ್ತಿರುವ ಆಕ್ಷೇಪಣೆಗಳಿಗೆ ಪ್ಯಾರಾವಾರು ಉತ್ತರ ನೀಡಿರುವುದನ್ನು ವಿಮರ್ಶಿಸಲಾಗುತ್ತಿದೆಯೇ; | ಪ್ರಸ್ತುತ ಈ ವಿಷಯವು ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಮೂಲಕ ಸಂಬಂಧಪಟ್ಟ ಇಲಾಖೆಗಳಿಂದ ಆಕ್ಷೇಪಣೆಗಳನ್ನು ಪರಿಶೀಲಿಸಿ ಉತ್ತರಗಳನ್ನು ನೀಡಲಾಗುತ್ತಿದೆ. |
| ಇ) | ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ಪ್ಯಾರಾದಲ್ಲಿ ಆಕ್ಷೇಪಣೆ ಎತ್ತಿರುವ ಹಣದ ಮೊಬಲಗನ್ನು ಸಂಬಂಧಿಸಿದ ಅಧಿಕಾರಿಗಳಿಂದ ಮತ್ತು ಗುತ್ತಿಗೆದಾರರುಗಳಿಂದ ವಸೂಲಿ ಮಾಡಲಾಗುತ್ತಿದೆ ಎಂಬುದನ್ನು ದೃಢೀಕರಿಸಲಾಗುತ್ತಿದೆಯೇ; (ಇಲಾಖಾವಾರು ಸಂಪೂರ್ಣ ಮಾಹಿತಿ ನೀಡುವುದು) | ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ಪ್ಯಾರಾದಲ್ಲಿ ಆಕ್ಷೇಪಣೆ ಎತ್ತಿರುವ ಹಣದ ಮೊಬಲಗನ್ನು ಸಂಬಂಧಿಸಿದ ಅಧಿಕಾರಿ ಮತ್ತು ಗುತ್ತಿಗೆದಾರರಿಂದ ವಸೂಲಿ ಮಾಡಲು ಸಂಬಂಧಿಸಿದ ಇಲಾಖಾ ಕಾರ್ಯದರ್ಶಿಗಳಿಂದಲೇ ಕ್ರಮ ವಹಿಸಲಾಗುತ್ತಿದೆ. |
| ಈ) | ಮುಖ್ಯಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಪ್ರತಿ ಮಾಹೆ ಕೆ.ಡಿ.ಪಿ ಸಭೆಯಲ್ಲಿ ಸಿ ಹಾಗೂ ಎ .ಜಿ ವರದಿಗಳನ್ನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ, ಸಾರ್ವಜನಿಕ ಉದ್ದಿಮೆಗಳ ಸಮಿತಿ ಮತ್ತು ನಗರ ಸ್ಥಳೀಯ ಸಂಸ್ಥೆ & ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯಲ್ಲಿ ತೆಗೆದುಕೊಂಡಿರುವ ಶಿಫಾರಸ್ಸುಗಳ ಅನುಷ್ಠಾನದ ಬಗ್ಗೆ ಚರ್ಚಿಸಲಾಗುತ್ತಿದೆಯೇ; ಇಲಾಖೆಗಳ ಮುಖ್ಯಸ್ಥರಿಂದ ಅನುಷ್ಠಾನದ ಬಗ್ಗೆ ನೀಡಿರುವ ವರದಿಯನ್ನು ದಾಖಲು ಮಾಡಲಾಗುತ್ತಿದೆಯೇ; ಸದನ ಸಮಿತಿಗೆ ಶಿಫಾರಸ್ಸನ್ನು ಅನುಷ್ಠಾನ ಮಾಡಿರುವ ಬಗ್ಗೆ ವರದಿಯನ್ನು ಕಳುಹಿಸಲಾಗುತ್ತಿದೆಯೇ? (ಇಲಾಖಾವಾರು ಸಂಪೂರ್ಣ ಮಾಹಿತಿ ನೀಡುವುದು) | ಇಲ್ಲ.<br>ಸದರಿ ವಿಷಯದ ಬಗ್ಗೆ ಕೆ.ಡಿ.ಪಿ. ಸಭೆಯಲ್ಲಿ ಪರಿಶೀಲನೆಯಾಗದೇ ಇರುವುದರಿಂದ ಸಂಬಂಧಿಸಿದ ಇಲಾಖೆಗಳಿಂದ ಮಾಹಿತಿ ಪಡೆಯಬಹುದಾಗಿದೆ. |

ಸಂಖ್ಯೆ: ಪಿಡಿಎಸ್ 11 ಐಪಿಆರ್ 2022

(ಮುನಿರತ್ನ)
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ ಸಚಿವರು